“ಅಲಿ ಎದ್ದು ನಿಲ್ಲು” ರೈನಾ ಹೇಳಿದಳು. “ಅಫ್ಘಾನಿನ ನೆನಪಿನ ಬಗ್ಗೆ ಹೇಳು... ಚಿಕ್ಕವನಿರುವಾಗ ಅಲ್ಲಿದ್ದಿಯಲ್ಲಾ ಸ್ವಲ್ಪ ಸಮಯ?”

ಅಲಿ ಎದ್ದು ನಿಂತ. ಮನದಲ್ಲಿ ಪರ್ವತಗಳ ನೆರಳೋ ಕಲ್ಲು ದಾರಿಗಳ ಚಳಿಯೋ ಒಂದೂ ಬಂದು ಇಣುಕಲಿಲ್ಲ. ನೆನಪುಗಳು ಹೆಚ್ಚೇನೂ ಇರಲಿಲ್ಲ, ವಾತಾವರಣದಲ್ಲಿ ತುಂಬಿ ನಿಂತ ಭಯ ಮಗುವಾಗಿದ್ದಾಗಲೇ ಮನಸ್ಸಲ್ಲಿ ಮೂಡಿಸಿದ ಬಿರುಕುಗಳಲ್ಲದೆ.

“ಏನಾದ್ರೂ ಹೇಳು” ಸ್ವಲ್ಪ ನಿರಾಶೆಯಿಂದ ರೈನಾ ಮತ್ತೆ ಹೇಳಿದಳು.

“ಮಿಸ್, ಅವನಿಗೆ ಊರೇ ಇಲ್ಲ...” ನಾಲ್ಕನೇ ಬೆಂಚಿನಿಂದ ಅಶ್ವಿನ್ ಕೂಗಿ ಹೇಳಿದ. “ಅವನ ಊರೆಲ್ಲಾ ಬಾಂಬ್ ಸ್ಫೋಟದಲ್ಲಿ ಚಿಂದಿಯಾಗಿದೆ.”

ಅಷ್ಟು ಹೊತ್ತೂ ಡೆಸ್ಕಿನೊಳಗೆ ಮಡಚಿಕೊಂಡಿದ್ದರಿಂದಲೊ ಏನೋ ಅಲಿಯ ಮೊಣಕಾಲು ನೋಯುತ್ತಿತ್ತು. ಅವನ ಬಲಗೈ ಬೆರಳುಗಳು ನಿಧಾನಕ್ಕೆ ಮೊಣಕಾಲಿನ ಮೇಲೆ ಆಡುತ್ತಿದ್ದವು.

ರೈನಾಳಲ್ಲಿ ಚಡಪಡಿಕೆ ತುಂಬಿತು. ಹರಿದುಹೋದ ತನ್ನ ಸ್ವಂತ ದೇಶವನ್ನು ನೆನಪಿಸಿಕೊಂಡು ಅವಳು ಅಶ್ವಿನ್‌ನನ್ನು ಕಣ್ಣಲ್ಲೇ ಗದರಿದಳು. ಅವನು ಗಮನಿಸಿದನೆಂದು ಅವಳಿಗೆ ಅನಿಸಲಿಲ್ಲ.

“ಹೌದು ಮಿಸ್...” ಸನಿಹ ಕುಳಿತಿದ್ದ ಅಹಮದ್ ಹೇಳಿದ. “ಮಿಸ್, ಅವನ ದೇಶದಲ್ಲಿ ಎಲ್ರೂ ಟೆರರಿಸ್ಟೇ... ಸಾಲದ್ದಕ್ಕೆ ಒಸಾಮನನ್ನು ಅಡಗಿಸಿಯೂ ಇಟ್ಟಿದ್ದರು.”

ಏನು ಹೇಳಬೇಕು ಎಂದು ತಿಳಿಯದೆ ರೈನಾ ತಬ್ಬಿಬ್ಬಾಗಿ ಅಲಿಯ ಕಡೆಗೆ ನೋಡಿದಳು. ಅವನ ತುಟಿಗಳು ನಡುಗಲಿಲ್ಲ. ಬಾಗಿ ನಿಂತಿದ್ದ ಕಣ್ಣುಗಳಲ್ಲಿ ಒರತೆಯಿಲ್ಲ. ರೈನಾ ಶಂಕೆಯಲ್ಲಿ ನಿಂತಳು. ಷಾದಿ ಎಂದಿನಂತೆ ಪ್ರತಿಮೆಯಾಗಿ ಕುಳಿತಿದ್ದ.

